# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್–153 – ಜಯನಗರ

## ವಾರ್ಡ್ ಸಮಿತಿಯ ಸದಸ್ಯರ ಸಭೆಯ ನಡವಳಿಗಳು

ದಿನಾಂಕ: **02–02–2019** ರಂದು ಶನಿವಾರ, ಬೆಳ್ಳಿಗ್ಗೆ **11:00** ಘಂಟೆಗೆ ಜಯನಗರ ವಾರ್ಡ್–153 ರ ವಾರ್ಡ್ ಸಮಿತಿಯ ಅಧ್ಯಕ್ಷರು ಹಾಗೂ ಪೂಜ್ಯ ಮಹಾಪೌರರು, ಶ್ರೀಮತಿ. ಗಂಗಾಂಬಿಕೆ ರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಲಾಯಿತು. ತದನಂತರ 6 ಜನ ಸದಸ್ಯರುಗಳು ಸಭೆಗೆ ಹಾಜರಾಗಿದ್ದು, ಸಭೆಯಲ್ಲಿ ಚರ್ಚಿಸಿದ ವಿಷಯಗಳು ಹಾಗೂ ನಿರ್ಣಯಗಳಿಗೆ ಸಂಬಂಧಿಸಿದ ಸದಸ್ಯರ ಸಭೆಯ ನಡವಳಿಗಳ ವಿವರಗಳು ಈ ಕೆಳಕಂಡಂತಿವೆ.

| ಕ್ರಮ. ಸಂಖ್ಯೆ | ಸಭೆಯಲ್ಲಿ ಚರ್ಚಿಸಿದ ವಿಷಯಗಳು: | ಸಭೆಯ ನಿರ್ಣಯಗಳು: |
|---|---|---|
| 1 | ಶ್ರೀ. ಮೋಹನ್ ಸಮಿತಿಯ ಸದಸ್ಯರು ಮಾತನಾಡಿ ಜಯನಗರ ವಾರ್ಡ್ ವ್ಯಾಪ್ತಿಯ ಪ್ರದೇಶಗಳಲ್ಲಿ ಬೀಳುವ ಸ್ಥಿತಿಯಲ್ಲಿರುವ ಮರಗಳು ಮತ್ತು ಕೊಂಬೆಗಳಿಂದ ಸಾರ್ವಜನಿಕರಿಗೆ ತೊಂದರೆಯಾಗದಂತೆ ಕ್ರಮ ವಹಿಸಲು ಕೋರಿರುತ್ತಾರೆ. | ಕಾರ್ಯದರ್ಶಿ ಮತ್ತು ಸಂಚಾಲಕರು ಈ ಬಗ್ಗೆ ಅರಣ್ಯ ಇಲಾಖೆಯವರು ಮಾತನಾಡಿ ಅತಿ ಜರೂರಾಗಿ ಹಂತ ಹಂತವಾಗಿ ಕ್ರಮ ಕೈಗೊಳ್ಳಲಾವುದು ಎಂದು ತಿಳಿಸಿರುತ್ತಾರೆ. |
| 2 | ಶ್ರೀ. ಸಯ್ಯದ್ ಆಶೀಫ್ ಮಸೂದ್, ಸಮಿತಿಯ ಸದಸ್ಯರು ಮಾತನಾಡಿ ಹಸು ಹಿಡಿಯುವ ವಾಹನಗಳನ್ನು ಹೆಚ್ಚಿಸುವ ಬಗ್ಗೆ ಕೋರಿರುತ್ತಾರೆ. | ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಪೂಜ್ಯ ಮಹಾಪೌರರು ಪ್ರತಿಕ್ರಿಯಿಸಿ ಕ್ರಮ ವಹಿಸುವುದುದಾಗಿ ತಿಳಿಸಿರುತ್ತಾರೆ. |

| | | |
|---|---|---|
| 3 | ಶ್ರೀಮತಿ. ಶಾನ್ ಅಹಮದ್, ಸಮಿತಿಯ ಸದಸ್ಯರು ಮಾತನಾಡಿ ಬಸವನಗುಡಿ ವ್ಯಾಪ್ತಿಯ ಗಲ್ಲಿಗಳಲ್ಲಿ ಸುಗಮವಾಗಿ ಮಳೆನೀರು ಹರಿಯುವಂತೆ ಕ್ರಮ ವಹಿಸಲು ಕೋರಿರುತ್ತಾರೆ. | ಈ ಬಗ್ಗೆ ಸಂಬಂಧಪಟ್ಟ ಪಾಲಿಕೆಯ ಅಧಿಕಾರಿಗಳಾದ ಶ್ರೀ. ನರಸಿಂಹಯ್ಯ ಎನ್. ಕಿರಿಯ ಅಭಿಯಂತರರು, ರವರು ಕ್ರಮ ಜರುಗಿಸಯವುದಾಗಿ ತಿಳಿಸಿರುತ್ತಾರೆ. |
| 4 | ಶ್ರೀ. ಬಹದ್ದೂರ್, ಗುಲ್ಬರ್ಗಾ ಕಾಲೋನಿ ಕಾರ್ಮಿಕರ ಸಂಘದ ಪದಾಧಿಕಾರಿಗಳು ಮಾತನಾಡಿ ನೀರಿನ ಸಮಸ್ಯೆ ಇರುವುದಾಗಿ ಹಾಗೂ ಬೋರ್‌ವೆಲ್‌ನ ಅವಶ್ಯಕತೆ ಇರುವುದಾಗಿ ಮನವಿ ಮಾಡಿರುತ್ತಾರೆ. | ಈ ಬಗ್ಗೆ ಸಂಬಂಧಪಟ್ಟ ಪಾಲಿಕೆಯ ಅಧಿಕಾರಿಗಳಾದ ಶ್ರೀ. ನರಸಿಂಹಯ್ಯ ಎನ್. ಕಿರಿಯ ಅಭಿಯಂತರರು, ರವರು ಕ್ರಮ ಜರುಗಿಸಯವುದಾಗಿ ತಿಳಿಸಿರುತ್ತಾರೆ. |
| **ಸಭೆಯಲ್ಲಿ ಹಾಜರಿದ್ದ ವಾರ್ಡ್-153ರ ವ್ಯಾಪ್ತಿಯಲ್ಲಿನ ನಾಗರೀಕರು ನೀಡಿರುವ ದೂರಿನ ವಿಷಯಗಳು ಮತ್ತು ನಿರ್ಣಯಗಳು** | | |
| 1 | ಶ್ರೀಮತಿ. ಶಿಲ್ಪ, ನಾಗರೀಕರು ವಾರ್ಡ್-153 ರವರು ಮಾತನಾಡಿ ಜಯನಗರ 2ನೇ ಬ್ಲಾಕ್ 9ನೇ ಮುಖ್ಯರಸ್ತೆಯಲ್ಲಿ ಮಲಬಾರ್ ಗೋಲ್ಡ್ ಜ್ಯುವಲರಿ ಶಾಪ್ ಜಂಕ್ಷನ್ ಹತ್ತಿರ ಮತ್ತು ಮಾದವನ್ ಪಾರ್ಕ್ ವೃತ್ತದ ಹತ್ತಿರ ಹೆಚ್ಚಿನ ವಾಹನ ದಟ್ಟಣೆ ಇದ್ದು, ಸಂಚಾರ ನಿರ್ವಾಹಕರ ಅವಶ್ಯಕತೆ ಇರುವುದಾಗಿ ಕೋರಿರುತ್ತಾರೆ. ಮತ್ತು ಹಸಿತ್ಯಾಜ್ಯ ಮತ್ತು ಒಣತ್ಯಾಜ್ಯದ ವಿಂಗಡಣೆಯ ಬಗ್ಗೆ ತಿಳಿಸಿರುತ್ತಾರೆ | ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಪೋಲೀಸ್ ಸಿಬ್ಬಂದಿಯವರು ಕ್ರಮ ವಹಿಸುವುದಾಗಿ ತಿಳಿಸಿರುತ್ತಾರೆ. ಹಾಗೂ ಪಾಲಿಕೆ ಅಧಿಕಾರಿಗಳು ಈ ಬಗ್ಗೆ ಕ್ರಮ ವಹಿಸುವುದಾಗಿ ತಿಳಿಸಿರುತ್ತಾರೆ. |
| 2 | ಶ್ರೀ . ಕುಮಾರ್ ನಾಗರೀಕರು ವಾರ್ಡ್-153 ರವರು ಮಾತನಾಡಿ ಜಯನಗರ 1ನೇ ಬ್ಲಾಕ್, 4ನೇ ಅಡ್ಡರಸ್ತೆ, ಸುತ್ತಮುತ್ತ ಅಪಘಾತಗಳು ಸಂಭವಿಸುತ್ತಿರುವುದರಿಂದ ಹಂಪ್‌ಗಳ ಅವಶ್ಯಕತೆ ಇರುವುದಾಗಿ ತಿಳಿಸಿರುತ್ತಾರೆ. | ಪಾಲಿಕೆ ಅಧಿಕಾರಿಗಳು ಈ ಬಗ್ಗೆ ಪರಿವೀಕ್ಷಣೆ ನಡೆಸಿ ಕ್ರಮ ವಹಿಸುವುದಾಗಿ ತಿಳಿಸಿರುತ್ತಾರೆ. |

| | | |
|---|---|---|
| 3 | ಶ್ರೀ. ವಿನಯ್‌ಕುಮಾರ್, ನಾಗರೀಕರು ವಾರ್ಡ್-153 ರವರು ಮಾತನಾಡಿ ಟ್ರೇಡ್ ಲೈಸನ್ಸ್ ಬಗ್ಗೆ ಮಾಹಿತಿ ಕೋರಿರುತ್ತಾರೆ. | ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಪೂಜ್ಯ ಮಹಾಪೌರರು ಪ್ರತಿಕ್ರಿಯಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ ಕ್ರಮ ವಹಿಸಿಲಾಗುವುದೆಂದು ತಿಳಿಸಿರುತ್ತಾರೆ. |

ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳನ್ನು ಹಾಗೂ ನಿರ್ಣಯಗಳನ್ನು ಕಾರ್ಯದರ್ಶಿ ಮತ್ತು ಸಂಚಾಲಕರು ಸಭೆಯ ನಡವಳಿಗಳ ಪುಸ್ತಕದಲ್ಲಿ ದಾಖಲಿಸಿದರು. ಸಭೆಯ ಸದಸ್ಯರು ವಂದನಾರ್ಪಣೆ ಮಾಡುವುದರ ಮೂಲಕ ಇಂದಿನ ಸಭೆಯನ್ನು ಮುಕ್ತಾಯಗೊಳಿಸಿದರು.

**ಕಾರ್ಯದರ್ಶಿ ಮತ್ತು ಸಂಚಾಲಕರು**
**ವಾರ್ಡ್-153**

**ಪೂಜ್ಯ ಮಹಾಪೌರರು ಹಾಗೂ ಅಧ್ಯಕ್ಷರು**